ಮುಚ್ಚಿಡುವ ಪ್ರಯತ್ನ ಇರದಿರುತ್ತಿದ್ದರೆ ಆತನ ಒಂದು ಕಾಲು ಡೆಸ್ಕಿನಿಂದ ಹೊರಗೂ, ಮತ್ತೊಂದು ಕಾಲು ಪಕ್ಕಕ್ಕೂ ಚಾಚಿರಬೇಕಿತ್ತು. ಹತ್ತಿರ ಹೋಗಿ ಅವನನ್ನು ತಪಾಸಿಸಲು ಭಯ. ಬಾಹುಬಲಿಯೆದುರು ಭರತನು ಹೊಡೆದಾಡಿ ಜಯಗಳಿಸಲು ಶಕ್ಯವೇ? ಅದೂ ಅಲ್ಲದೇ ತಪಾಸಣೆಯ ವೇಳೆ ಏನೂ ಸಿಗದೇ ಹೋದರೆ ತೀವ್ರ ಮುಖಭಂಗವಾಗಿ ಮುಂದಿನ ಸೆಮಿಸ್ಟರಿನಲ್ಲಿ ಆತನು ಕಾರಿಡಾರಿನಲ್ಲಿ ಓಡಾಡುವಾಗಲೆಲ್ಲಾ ತನ್ನ ಪಡೆಯೊಂದಿಗೆ ಯುದ್ಧಕ್ಕೆ ಬಂದರೇನು ಗತಿ? ಇನ್ನು ಹಿರಿಯ ಪರೀಕ್ಷಾ ಮೇಲ್ವಿಚಾರಕರನ್ನು ಕರೆಯೋಣವೆಂದರೆ ಅವರು ನನಗಿಂತ ಪೀಚಲಾದ ಆಳು. ಗಾಳಿ ಜೋರಾಗಿ ಬೀಸಿದರೆ ಬಾಚಿಕೊಳ್ಳಲು ಹತ್ತಿರದ ಆಧಾರಕ್ಕೆ ಒರಗುವಂತಹವರು. ಅವರಿಗೆ ತಿಳಿಸಿದರೂ ಏನೂ ಆಗಲಿಕ್ಕಿಲ್ಲವೆಂದೆನ್ನಿಸಿತು. ಏನು ಮಾಡುವುದು?

ನನ್ನ ಪುಣ್ಯಕ್ಕೆ ವಿದ್ಯಾರ್ಥಿಗಳು ಬರೆಯಲು ಬಳಸುತ್ತಿದ್ದ ಡೆಸ್ಕು ಸಾವಿರಾರು ತೂತುಗಳುಳ್ಳ ಕಬ್ಬಿಣದ ತಗಡಿನಿಂದ ಮಾಡಲ್ಪಟ್ಟಿತ್ತು. ನೋಡಿ! ಇಂತಹ ತೂತಾದ ಡೆಸ್ಕಿನ ಹಿಂದೆಯೂ ಒಂದು ತಥ್ಯವಿರಬೇಕು. ಆ ತೂತುಗಳ ಮುಖಾಂತರ ಮೇಲ್ವಿಚಾರಣೆಯ ಸಂದರ್ಭಗಳಲ್ಲಿ ಒಳಗಿಟ್ಟ ವಸ್ತುಗಳ ಸ್ಥೂಲ ಚಿತ್ರಣ, ಹೊರಾಕೃತಿ, ಹೊಳಪುಗಳೆಲ್ಲಾ ಕಣ್ಣಿಗೆ ಬೀಳುತ್ತವೆ. ಯಾವನೋ ಪುಣ್ಯಾತ್ಮನು ತಲೆಯೋಡಿಸಿ ಮೇಲ್ವಿಚಾರಕರ ಅನುಕೂಲಕ್ಕಾಗಿ ಇಂತಹ ಡೆಸ್ಕುಗಳನ್ನು ನಿರ್ಮಿಸಿರಬಹುದು. ನಾನು ಕಿಂಡಿಯ ಮೂಲಕ ಡೆಸ್ಕಿನ ಒಳಗೆ ಇದ್ದಿರಬಹುದಾದ ವಸ್ತುಗಳನ್ನೆಲ್ಲಾ ಅವಲೋಕಿಸಲು ಶುರುಮಾಡಿದೆ. ಮೊದಮೊದಲು ಇಲ್ಲಿಯೂ ನನ್ನ ಅದೃಷ್ಟ ಕೈಕೊಟ್ಟಿತ್ತು. ಆಜಾನುಬಾಹುವು ಬೆಳಕು ಒಳ ಪ್ರವೇಶಿಸದಂತೆ ಆತು ಕುಳಿತುಕೊಂಡಿದ್ದ; ಕಿಲಾಡಿ. ಓದುತ್ತಿದ್ದುದು ಸಮಾಜ ಕಾರ್ಯವನ್ನು, ಪ್ರಯೋಗಿಸುತ್ತಿದ್ದುದು ಭೌತಶಾಸ್ತ್ರದ ಬೆಳಕಿನ ನಿಯಮಗಳನ್ನು!

ಊಂಹ್ಞೂಂ... ಯಾವ ಕೋನದಲ್ಲಿ ನೋಡಿದರೂ ಒಳಗಿನ ವಸ್ತುಗಳು ಕಾಣುತ್ತಿಲ್ಲ. ಅದೇ ಸಮಯಕ್ಕೆ ಒಂದು ಗಂಟೆಯ ಬೆಲ್ಲಾಯಿತು. ಎಲ್ಲರೂ ಎಚ್ಚೆತ್ತು ಅಕ್ಕಪಕ್ಕದವರನ್ನೂ, ಠಳಾಯಿಸುತ್ತಿದ್ದ ನನ್ನ ಮೋರೆಯನ್ನೂ ದಿಟ್ಟಿಸತೊಡಗಿದರು. ನಾನು ಮಾತ್ರ ಅರ್ಜುನನ ರೀತಿ ಆಜಾನುಬಾಹುವಿನ ಡೆಸ್ಕಿನ ತೂತುಗಳತ್ತಲೇ ಚಿತ್ತವನ್ನಿಟ್ಟಿದ್ದೆ. ಅಂತೂ ಬೆಲ್ಲಿನ ಶಬ್ದಕ್ಕೆ ಬೆಚ್ಚಿದ ಹುಡುಗನು ಬೆನ್ನನ್ನು ಕ್ಷಣಕಾಲ ಬಿಲ್ಲಿನಂತೆ ಮಾಡಿ ಮೈಮುರಿದ. ತಕ್ಷಣಕ್ಕೇ ಕಿಡಕಿಯಿಂದ ತೂರಿಬಂದ ಬೆಳಕು ಒಳಗಿಟ್ಟಿದ್ದ ಚೌಕಾಕಾರದ ಯಾವುದೋ ವಸ್ತುವಿನ ಮೇಲೆ ಬಿದ್ದು ಫಳ್ ಎಂದು ಹೊಳೆಯಿತು. ಮತ್ತದರ ಎತ್ತರವು ಒಂದು ಸಣ್ಣ ಬರ್ಗರಿನ ಎತ್ತರಕ್ಕಿತ್ತು!

ನನ್ನ ತಲೆಯಲ್ಲಿಯೂ ಬತ್ತಿ ಉರಿಯಿತು! ಹೊಳೆಯುವ ಸಾಧ್ಯತೆಗಳಿರುವುದು ವಿದ್ಯಾರ್ಥಿಗಳ ಐಡೆಂಟಿಟಿ ಕಾರ್ಡಿಗೆ ಮಾಡಿರುವ ಲ್ಯಾಮಿನೇಷನ್ ಪರದೆಯಿಂದಾಗಿ. ಆದರೆ, ಆ ಕಾರ್ಡು ಅಷ್ಟೆತ್ತರ, ದಪ್ಪ ಇರುವುದಿಲ್ಲ. ಇನ್ನು ಏನಿರಬಹುದು? ನೋಟುಗಳು ಬ್ಯಾನಾಗಿ ನೂರರ ನೂರಾರು ನೋಟುಗಳು ತುಂಬಿದ್ದಿರಬಹುದಾದ ಬಸರಿಯ ಹೊಟ್ಟೆಯಂತೆ ಉಬ್ಬಿರುವ ಪರ್ಸು ಇಲ್ಲವೇ ಮೊಬೈಲ್ ಫೋನು. ಬೇರೆ ಏನಿರಲು ಶಕ್ಯ? ಹೀಗೆಂದು ಎಲ್ಲಿಲ್ಲದ ಧೈರ್ಯದೊಂದಿಗೆ ಆತನ ಬಳಿ ಹೋಗಿ ಅವನ ಐಡೆಂಟಿಟಿ ಕಾರ್ಡನ್ನು ಕೇಳಿದೆ. ಡೆಸ್ಕಿನೊಳಗೆ ಕೈ ತೂರಿಸಿ ತೆಗೆದುಕೊಟ್ಟು ಹಲ್ಲು ಕಿರಿದ. ಆದರೂ ಆತುಕೊಂಡೇ ಇದ್ದ. ಅನುಮಾನ ಬಲವಾಯಿತು. ಮುಲಾಜಿಲ್ಲದೇ ಆತನ ಗಡುಸಾದ ದೇಹವನ್ನು ಪಕ್ಕಕ್ಕೆ ಸರಿಸಿ ಡೆಸ್ಕಿನೊಳಗೆ ಕೈಹಾಕಿದರೆ ಸಿಕ್ಕಿದ್ದು ಬಾತುಕೊಂಡಿದ್ದ ಪರ್ಸು ಮತ್ತು ಹೊಳೆಯುವ ಮೊಬೈಲು!

ಕಪ್ಪಿಟ್ಟ ಮೋರೆಯೊಂದಿಗೆ ಕೈಮುಗಿದು ನನ್ನ ಕಾಲಿಗೆರಗಿದ ಭುಜಬಲಿ! ಆಗ ಪರಿಸ್ಥಿತಿಯ ಸಂಪೂರ್ಣ ನಿಯಂತ್ರಣ ನನ್ನ ಕೈಯಲ್ಲಿತ್ತು. ಸಣ್ಣದಾದ ಪಮೇರಿಯನ್ ನಾಯಿಯೆದುರು